22. C.S. Tubachi

23, S. V. Patil (deceased)

24. M. K. Kowatgimath.

25. B. V. Sambargi (Appex Bank-nominee)

26. Deputy Registrar of Co-operative Socities, Belgaum (Government Nominee)

ಶ್ರೀ ಜೆ. ಎಸ್. ಅಮ್ಮಣ್ಣನವರ್.—ತಾವು ಹೆಸರುಗಳನ್ನು ಕೊಟ್ಟಿರತಕ್ಕ ಪಟ್ಟಿಯನ್ನು ನೋಡಿದರೆ ಅವರು ಬಹಳ ಇನ್‌ಫ್ಲುಯನ್‌ಷಿಯಟ್ ಜನ ಇರುವುದರಿಂದ ೨೭ ಅಕ್ಟೋಬರ್ ೧೯೭೫ ರಿಂದ ಒಂದು ವರ್ಷವಾದರೂ ಲಯಾಬಿಲಿಟಿ ಫಿಕ್ಸ್ ಮಾಡುವುದಕ್ಕೆ ಆಗಿಲ್ಲ ಎಂದು ನನಗನ್ನಿಸುತ್ತದೆ. ಆದುದರಿಂದ ತಾವು ಜಾಗ್ರತೆ ಕ್ರಮ ತೆಗೆದುಕೊಂಡು ರಾಜ್ಯದಲ್ಲಿ ಅಂತಹ ಇನ್‌ಫ್ಲುಯನ್‌ಷಿಯಲ್ ಜನ ಯಾರಿದ್ದಾರೆ. ಅವರ ಬಗ್ಗೆ ತನಿಖೆ ನಡೆಸಿ, ಮುಂಬ್ಬಗೋಲು ಹಾಕಿಕೊಂಡು ಲಯಾಬಿಲಿಟಿ ಫಿಕ್ಸ್ ಮಾಡುತ್ತೀರಾ,

† ಶ್ರೀ ಕೆ. ಎಚ್. ರಂಗನಾಥ್.—ಈಗಾಗಲೇ ಸೆಕ್ಷನ್ 69 ರ ಪ್ರಕಾರ ಸರ್ಚಾರ್ಜ್ ಪ್ರೊಸೀಡಿಂಗ್ಸ್ ಪ್ರಾರಂಭವಾಗಿವೆ. ೮-೯ ೧೯೭೬ರಲ್ಲಿ ರಿಜಿಸ್ಟ್ರಾರ್ ನೋಟೀಸ್ ಕೊಟ್ಟಿದ್ದಾರೆ.

Units of Meteorological Department in Bijapur District.

180 Sri B. M. Horakeri (Guledgud) :—Will the Minister for Agriculture be pleased to state :—

(*a*) whether it is not a fact that in Bijapur District weather conditions are uncertain, uneven, erratic, besides scanty rains, which is a regular feature every year ?

(*b*) if so, whether the University of Agricultural Sciences or th Department of Agriculture has arranged for watching and observing the weather conditions and agricultural situation through the units of the Meteorological Department established at every 20 30 miles radius areas to identify the contingencies and to suggest the alternative strategies :

(*c*) if so, where these Meteorological units are working and the places to which these technical advice has been made available in the past ?

SRI N. CHIKKE GOWDA:—(Minister for Agriculture).

(*a*) Bijapur is a drought prone District.

(*b*) *and* (*c*) There are 54 rain gauge stations in the District apart from an observatory of the India Meteorological Department at Bijapur. The University of Agricultural Sciences has a research sub-station at Bijapur of the Dry Farming Research Unit with headquarters at Bangalore. A weekly crop weather bulletin is issued by the Government.

ಶ್ರೀ ಎಂ ಎಂ. ಸಜ್ಜನ್ :—ಸ್ವಾಮಿ, ವಿಜಾಪುರ ಜಿಲ್ಲೆಯಲ್ಲಿ ಹೆಳೆ ಮಳೆಮಾಪಕ ನಿಲ್ದಾಣಗಳಿವೆ ಯೆಂದು ಹೇಳಿದ್ದೀರಿ. ಈ ಮಳೆಮಾಪಕ ನಿಲ್ದಾಣಗಳು ಎಷ್ಟು ಮೈಲಿಗಳಿಗೆ ಒಂದೊಂದು ಇವೆ ಮತ್ತು ಎಲ್ಲೆಲ್ಲಿ ಇವೆ ಎನ್ನುವುದನ್ನು ತಿಳಿಸುತ್ತೀರಾ ?

† ಶ್ರೀ ಎನ್. ಚಿಕ್ಕೇಗೌಡ :—ಸಾಮಾನ್ಯವಾಗಿ ೫೦೦ ಚದರ ಮೈಲಿಗೆ ಒಂದು ರೈನ್‌ಗೇಜ್ ಸ್ಟೇಷನ್ ಆಗಬೇಕು ಎಂದು ಇದೆ. ವಿಜಾಪುರದ ಹೆಳೆ ರೈನ್‌ಗೇಜ್ ಸ್ಟೇಷನ್‌ಗಳು ಸರಾಸರಿ ೩೦೦.೮ ಚದರ ಕಿಲೋಮೀಟರಿಗೆ ಒಂದರಂತೆ ಇದೆ.

ಶ್ರೀ ಎಂ. ಎಂ. ಸಜ್ಜನ್ :—ವಾತಾವರಣ ಇಲಾಖೆಯವರು ಅಲ್ಲಲ್ಲಿ ಘಟಕಗಳನ್ನು ಇಡುವುದರಿಂದ ಹವಾಮಾನದ ಹೆಚ್ಚು ಕಡಿಮೆ ಮತ್ತು ಮಳೆ ಪ್ರಮಾಣ ಗೊತ್ತಾಗುತ್ತದೆ. ವಿಜಾಪುರ ಜಿಲ್ಲೆ ಆಗಾಗ ಬರಗಾಲಕ್ಕೆ ತುತ್ತಾಗುವುದರಿಂದ ಅರಿಂದ ೧೦ ಮೈಲಿ ಅವರ್ತಕ್ಕೆ ಈ ಘಟಕಗಳು ನಿರ್ಮಾಣ ವಾಗುವಂತೆ ಸರ್ಕಾರದವರು ಏನಾದರೂ ಭರವಸೆ ಕೊಡುತ್ತಾರೆಯೇ ?

ಶ್ರೀ ಎನ್. ಚಿಕ್ಕೇಗೌಡ :—ವಿಜಾಪುರ ಜಿಲ್ಲೆ ಆಗಾಗ ಬರಗಾಲಕ್ಕೆ ತುತ್ತಾಗುವುದಿಲ್ಲ, ಇರತಕ್ಕ ಅಂಕಿಅಂಶಗಳ ಪ್ರಕಾರ ೫೦ ವರ್ಷಗಳಿಗೊಂದುಸಾರಿ ಬರಗಾಲಕ್ಕೆ ತುತ್ತಾಗುತ್ತದೆ. ಅಲ್ಲಿ ಈಗ ರೈನ್ ಗೇಜ್ ಸ್ಟೇಷನ್‌ಗಳು ಸಾಕಷ್ಟು ಇವೆ. ಅವುಗಳನ್ನು ಸರಿಯಾಗಿ ನೋಡಿಕೊಂಡರೆ, ಮಳೆ ಪ್ರಮಾಣ, ಹವಾಮಾನ ನೋಡುವುದಕ್ಕೆ ಸಾಧ್ಯವಾಗುತ್ತದೆ. ಈಗಿರುವುದಕ್ಕಿಂತ ಹೆಚ್ಚಿಗೆ ಅವಶ್ಯಕತೆ ಇದ್ದರೆ ರೈನ್ ಗೇಜ್ ಸ್ಟೇಷನ್‌ಗಳನ್ನು ಹೆಚ್ಚು ಮಾಡೋಣ.

ಶ್ರೀ ಎಂ. ಎಂ ಸಜ್ಜನ್ :—ಈಗ ತಮ್ಮ ಉತ್ತರಕ್ಕೆ ಅನುಸಾರವಾಗಿ ೧೯೭೬ರ ಅಕ್ಟೋಬರ್‌ನಲ್ಲಿ ಆಯಾ ಘಟಕಗಳ ಸಮೀಕ್ಷೆಯ ವರದಿ ಸರ್ಕಾರಕ್ಕೆ ಬಂದಮೇಲೆ ಬಿಜಾಪುರದ ಯಾವ ಯಾವ ತಾಲ್ಲೂಕು ಗಳಲ್ಲಿ ಮತ್ತು ಬರಗಾಲಕ್ಕೆ ತುತ್ತಾದಂಥ ಪ್ರದೇಶದಲ್ಲಿ ಯಾವ ಯಾವ ಬೆಳೆಗಳನ್ನು ಇಡಲು ಉದ್ದೇಶಿಸ ಲಾಗಿದೆ.

ಶ್ರೀ ಎನ್. ಚಿಕ್ಕೇಗೌಡ :—ಈ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಉತ್ತರ ಹೇಳಬಹುದು. ಇಲ್ಲಿರತಕ್ಕ ಪ್ರಶ್ನೆ ಬಿಜಾಪುರ ಜಿಲ್ಲೆಯನ್ನು ಡ್ರಾಟ್‌ಪ್ರೋನ್ ಏರಿಯಾ ಡಿಸ್ಟ್ರಿಕ್ಟ್ ಎಂದು ಡಿಕ್ಲೇರ್ ಮಾಡುವಂಥಾದ್ದು ಮತ್ತು ರೈನ್‌ಗೇಜ್ ಸ್ಟೇಷನ್‌ಗಳ ಅವಶ್ಯಕತೆ ಹೆಚ್ಚಿಗೆ ಇದ್ದರೆ ಹೆಚ್ಚಿಗೆ ಮಾಡುವಂಥಾದ್ದು. ಆದರೆ ಬರಗಾಲ ಪ್ರದೇಶದಲ್ಲಿ ಯಾವ ಯಾವ ಕಾಲಕ್ಕೆ ಯಾವ ಯಾವ ಬೆಳೆಯನ್ನು ತೆಗೆದುಕೊಳ್ಳಬೇಕು, ಅಲ್ಲಿ ಬರತಕ್ಕ ಮಳೆಗೆ ಅನುಸಾರವಾಗಿ ಯಾವ ಯಾವ ಬೆಳೆಯನ್ನು ಇಡಬೇಕು ಎನ್ನುವ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಹೇಳುತ್ತೇನೆ.

Legislation to sterilise lepers, T. B. patients etc.

196 SRI. PRABHAKAR TELKAR :—(Kalagi). Will the Minister for Health be pleased to state :—

(*a*) whether the Government propose to bring in legislation to sterilise the lepers, T. B Patients and such other category of persons who are suffering from Contagious diseases :

(*b*) if so, the total number of lepers, T. B. Patients and such other category of persons now in the State as on 30th June 1976 ?

SRI H. M. CHANNABASAPPA :—(Minister for Health).

(*a*) No.

(*b*) Does not arise.